MYSORE LEGISLATIVE ASSEMBLY

TWENTY-FIFTH DAY.

Friday, 19th March 1954.

The House met in the Assembly Hall, Old Public Offices, Bangalore, at Twelve of the Clock.

MR. SPEAKER (SRI H. SIDDAIYA, B.A., LL.B.) in the Chair.

QUESTIONS AND ANSWERS.

Accommodation for Courts at Tiptur.

Q.—903. **Sri T.G. THIMME GOWDA** (Tiptur).—

Will the Government be pleased to state :—

(*a*) the total amount of rent paid annually to accommodate the courts of the Special First Class Magistrate and Munsiff at Tiptur ;

(*b*) whether they have contemplated any steps to save this enormous expenditure and construct their own buildings ?

A.—**Sri A. G. RAMACHANDRA RAO** (Minister for Law and Education).—

(*a*) Rs. 3,180 annually.

(*b*) The matter is under consideration of Government.

ಶ್ರೀ ಟಿ. ಜಿ. ತಿಮ್ಮೇಗೌಡ.—ಎಷ್ಟು ವರ್ಷಗಳಿಂದ ಈ ರೀತಿ ಬಾಡಿಗೆ ಕೊಡುತ್ತಾ ಇದ್ದೀರಿ ?

ಶ್ರೀ ಎ. ಜಿ. ರಾಮಚಂದ್ರರಾವ್.—ಬಹುಶಃ ಕೋರ್ಟು ಪ್ರಾರಂಭವಾದಂದಿನಿಂದ ಬಾಡಿಗೆ ಕಟ್ಟಡದಲ್ಲೇ ಇದೆ.

ಶ್ರೀ ಟಿ. ಜಿ. ತಿಮ್ಮೇಗೌಡ.—ಇಲ್ಲಿಯವರೆಗೂ ಒಟ್ಟು ಎಷ್ಟು ಮೊಬಲಗನ್ನು ಬಾಡಿಗೆಗೆ ಕೊಟ್ಟಿದ್ದೀರಿ ?

ಶ್ರೀ ಎ. ಜಿ. ರಾಮಚಂದ್ರರಾವ್.—ವರ್ಷಕ್ಕೆ ಇಷ್ಟು ಎಂದು ಹೇಳಿ ಕೊಟ್ಟಿದೆ. ಅದನ್ನು ಲೆಕ್ಕಾಚಾರ ಮಾಡಿಲ್ಲ.

ಶ್ರೀ ಟಿ. ಜಿ. ತಿಮ್ಮೇಗೌಡ.—ಮುನ್ಸಿಫ್ ಕೋರ್ಟು ಮತ್ತು ಮ್ಯಾಜಿಸ್ಟ್ರೇಟ್ ಕೋರ್ಟುಗಳಿಗೆ ಕಟ್ಟಡ ಅತ್ಯವಶ್ಯಕವಾಗಿ ಬೇಕಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅವಶ್ಯಕತೆ ಇದೆ.

ಶ್ರೀ ಟಿ. ಜಿ. ತಿಮ್ಮೇಗೌಡ.—ಸ್ವಂತ ಕಟ್ಟಡಗಳನ್ನು ಕಟ್ಟಿಸುವ ವಿಚಾರ ಪರ್ಯಾಲೋಚನೆಯಲ್ಲಿದೆ ಎಂದು ಉತ್ತರದಲ್ಲಿ ಕೊಟ್ಟಿದ್ದೀರಿ. ಎಷ್ಟು ವರ್ಷಗಳಿಂದ ಪರ್ಯಾಲೋಚನೆಯಲ್ಲಿದೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಕೋರ್ಟು ಮೊದಲು ಹಂಗಾಮಿಯಾಗಿರಬೇಕೇ ಅಥವಾ ಖಾಯಂ ಆಗಿ ಇರಬೇಕೇ ಎಂಬ ಪ್ರಶ್ನೆ ಇತ್ತು. ಈಗ ನೋಡಿದ್ದರಲ್ಲಿ ಖಾಯಂ ಆಗಿ ಇರಬೇಕೆಂದು ಕಾಣುತ್ತಿದೆ. ಆದ್ದರಿಂದ ಇದನ್ನು ತೀರ್ಮಾನ ಮಾಡುತ್ತೇವೆ.

ಶ್ರೀ ಟಿ. ಜಿ. ತಿಮ್ಮೇಗೌಡ.—ಖಾಯಂ ಆಗಿ ಇರಬೇಕು ಎಂದು ಗಮನಕ್ಕೆ ಬಂದಮೇಲೆ ಕೂಡಲೇ ಕಟ್ಟಡ ಕಟ್ಟಿಸಲಿಕ್ಕೆ ಆಲೋಚನೆ ಮಾಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಪರ್ಯಾಲೋಚನೆ ಮಾಡುತ್ತೇನೆ.

ಶ್ರೀ ಟಿ. ಎಸ್. ಮೂಡಲಗಿರಿಗೌಡ.—ಸಬ್ ಡಿವಿಜನ್ ಆಫೀಸು ಇರತಕ್ಕ ಕಟ್ಟಡದಲ್ಲೇ ಈ ಕೋರ್ಟು ನಡೆಸುವುದಕ್ಕೆ ಆಗುವುದಿಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ. ಡೆಪ್ಯುಟಿ ಕಮಿಷನರ ರಿಪೋರ್ಟಿನಲ್ಲಿ ಅದಕ್ಕೆ ಬೇರೆ ಇನ್ನಾವುದೂ ಕಟ್ಟಡ ಇಲ್ಲ ಎಂದು ರಿಪೋರ್ಟ್ ಮಾಡಿದ್ದಾರೆ.

College at Chikballapur.

Q.—968. **Sri A. MUNIYAPPA** (Sidlaghatta-Chikballapur — Scheduled Castes).—

Will the Government be pleased to state :—

(*a*) whether they intend to establish a College at Chikballapur ;

(*b*) whether any correspondence has taken place previously in this behalf ?

A.—**Sri A. G. RAMACHANDRA RAO** (Minister for Law and Education).—

(*a*) The matter has not been considered by the University.

(*b*) No.

ಶ್ರೀ ಎ. ಮುನಿಯಪ್ಪ.—ಹಿಂದೆ ಮುನಿಸಿಪಾಲಟಿಯವರು ಕಾಲೇಜು ಬೇಕೆಂದು ಮನವಿ ಏನಾದರೂ ಕಳುಹಿಸಿದ್ದಾರೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅಲ್ಲಿಂದ ಯಾವುದೂ ಬಂದದ್ದು ನನಗೆ ಗೊತ್ತಿಲ್ಲ.

ಶ್ರೀ ಎ. ಮುನಿಯಪ್ಪ.—ಇದು ಡಿಸ್ಟ್ರಿಕ್ಟಿಗೆ ಮಧ್ಯ ಪ್ರದೇಶ, ಆರೋಗ್ಯ ಸ್ಥಳ ; ಆದ್ದರಿಂದ ಇಲ್ಲಿ ಒಂದು ಕಾಲೇಜು ಸ್ಥಾಪನೆ ಮಾಡುವುದಕ್ಕೆ ಸರ್ಕಾರದವರು ಏನಾದರೂ ಆಲೋಚಿಸಿದ್ದಾರೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಕಾಲೇಜು ಸ್ಥಾಪನೆ ಮಾಡತಕ್ಕ ವಿಷಯದಲ್ಲಿ ಪರ್ಯಾಲೋಚನೆ ಮಾಡುವುದಕ್ಕೆ ಇನ್ನು ಅನೇಕ ವಿಷಯಗಳು ಇರುತ್ತವೆ.

ಶ್ರೀ ಕೊಟ್ರ ಬಸವನಗೌಡ.—ಬಳ್ಳಾರಿಯಲ್ಲಿ ಕಾಲೇಜು ಬೇಕೆಂದು ಕೇಳುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

Sri A. G. RAMACHANDRA RAO.—That does not arise from this.

Establishment of a locally suited industry in Malavally Taluk.

Q.—726. **Sri M. CHIKKALINGIAH** (Malavalli—Scheduled Castes).—

Will the Government be pleased to state :—

(*a*) whether it is not a fact that the people of Malavalli are constantly representing before Government to start locally suited industry in this taluk to improve the economic conditions of the people ;

(*b*) if so, what action has been taken by them in this behalf ?

A.—**Sri H. SIDDAVEERAPPA** (Minister for Home and Industries).—

(*a*) Yes.

(*b*) A Scheme for the expansion of the Cottage Industry, Smithy Centre at Malavalli and manufacture of cycle parts with assistance from the Government of India is being examined. The matter is under correspondence with them.

The starting of a Sugar Factory in the area has been examined by the Director of Industries and Commerce who has recommended that facilities admissible under the State Aid to Industries Act may be granted, if private enterprise were to take up this. This is also under examination.

ಶ್ರೀ ಎಂ. ಚಿಕ್ಕಲಿಂಗಯ್ಯ.—If private enterprise were to take up this ಎಂದು ಹೇಳಿದ್ದೀರಿ. Private enterprise ಎಂದರೆ ನಮ್ಮ part of the work ಏನು ಎಂಬುದನ್ನು ಹೇಳುತ್ತೀರಾ?

ಶ್ರೀ ಎಚ್. ಸಿದ್ದವೀರಪ್ಪ.—Private enterpriseನವರು capital rise ಮಾಡಬೇಕು. ಇಂಥಿಂಥಾ ಇಂಡಸ್ಟ್ರೀಗೆ ಇಂಥಿಂಥಾ ಫೆಸಿಲಿಟೀಸ್ ಇದೆ, ಸಹಾಯ ಮಾಡಬೇಕು ಎಂದು ಕೇಳಿದರೆ ಏನು ಸಹಾಯ ಮಾಡಲಕ್ಕೆ ಸಾಧ್ಯವೋ ಅದನ್ನು ಮಾಡುತ್ತೇವೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಈ ಉತ್ತರದ ಆಧಾರದ ಮೇಲೆ ಪ್ರಯತ್ನಪಡಬಹುದೇ?

Sri H. SIDDAVEERAPPA.—So far as a sugar factory is concerned, I cannot definitely say, for this reason. ಷ್ಯುಗರ್ ಫ್ಯಾಕ್ಟರಿ ಬೇಕು ಎಂದು ಕೇಳಿದ್ದಾರೆ. ಎಕ್ಸಾಮಿನ್ ಮಾಡಬೇಕೆಂದು ಹೇಳಿದ್ದೇವೆ. ಹೊಸ ಫ್ಯಾಕ್ಟರಿ ಆಗಬೇಕಾದರೆ ಗವರ್ನಮೆಂಟ್ ಆಫ್ ಇಂಡಿಯಾದವರ ಪರ್ಮಿಷನ್ ಬೇಕು, ಫೆಸಿಲಿಟೀಸ್ ಇಂಥಿಂಥಾದ್ದು ಇದೆ ಎಂದು ಹೇಳಿದರೆ ಗವರ್ನಮೆಂಟ್ ಆಫ್ ಇಂಡಿಯಾದವರಿಗೆ ಬರೆಯುತ್ತೇನೆ. ಪರ್ಮಿಷನ್ ಕೊಟ್ಟರೆ ಮುಂದುವರಿಯಬಹುದು.

ಶ್ರೀ ಎಂ. ಚಿಕ್ಕಲಿಂಗಯ್ಯ.—ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟಿನವರನ್ನು ಕೇಳಿ ತಾನೆ ತೀರ್ಮಾನ ಮಾಡುವುದು?

ಶ್ರೀ ಎಚ್. ಸಿದ್ದವೀರಪ್ಪ.—ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟಿನವರೂ, ನಾವೂ ಎಕ್ಸಾಮಿನ್ ಮಾಡಿದ್ದೇವೆ. ಷ್ಯುಗರ್ ಫ್ಯಾಕ್ಟರಿ ಪ್ರೈವೇಟ್ ಕ್ಯಾಪಿಟಲ್ ಮೇಲೆ ಪ್ರಾರಂಭಿಸುವುದಕ್ಕೆ ನಮ್ಮದೇನೂ ಆಭ್ಯಂತರ ಏಲ್ಲ. ಒಂದು ಅಂಶ ಮಾತ್ರ ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಈಗಾಗಲೇ ಗವರ್ನಮೆಂಟ್ ಆಫ್ ಇಂಡಿಯಾದವರು ಇಡೀ ಸೌತ್ ಇಂಡಿಯಾಕ್ಕೆ ಆರು ಫ್ಯಾಕ್ಟರಿಗಳನ್ನು ಪ್ರಾರಂಭಿಸಬಹುದು ಎಂದು ಹೇಳಿದ್ದಾರೆ. ಭದ್ರಾವತಿಗೆ ಒಂದು ಕೊಟ್ಟಿದ್ದಾರೆ. ಅಮೇಲೆ ಬಳ್ಳಾರಿ ಜಿಲ್ಲೆಯಲ್ಲಿ ಇನ್ನೊಂದು ತೆಗೆಯಬೇಕೆಂದು ಒತ್ತಾಯ ಬರುತ್ತಾ ಇದೆ. ಆದ್ದರಿಂದ ಇತರ ಕಡೆಗಳಲ್ಲಿ ತೆಗೆಯುವುದಕ್ಕೆ ಎಷ್ಟು ಮಟ್ಟಿಗೆ ಸಾಧ್ಯವಿದೆ ಎಂಬುದು ಗವರ್ನಮೆಂಟ್ ಆಫ್ ಇಂಡಿಯಾದವರ ಪರ್ಮಿಷನ್ ಮೇಲೆ ಅವಲಂಬಿಸಿದೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ನಾಳೆ ದಿವನ capital rise ಮಾಡಬೇಕಾದರೆ ಒಂದು ಆಧಾರ ಬೇಕಿಲ್ಲ. ಅದಕ್ಕೇ ಕೇಳುತ್ತಾ ಇದ್ದೇನೆ.

Sri H. SIDDAVEERAPPA.—Very well, I will write to the Government of India. I shall let you know whether they are prepared to give the required permission, if an application is given.

ಶ್ರೀ ಬಿ. ಹುಚ್ಚೇಗೌಡ.—ಈಗಾಗಲೇ ಮದರಾಸಿನಲ್ಲಿ ಮೂರು ಫ್ಯಾಕ್ಟರಿ ಸ್ಟಾರ್ಟ್ ಮಾಡುವುದಕ್ಕೆ ಗವರ್ನಮೆಂಟ್ ಆಫ್ ಇಂಡಿಯಾದವರ ಸ್ಯಾಂಕ್ಷನ್ ಆಗಿಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—ಎಷ್ಟು ಎನ್ನುವ ಅಂಕಿ ಅಂಶ ನನ್ನಲ್ಲಿಲ್ಲ. ಹೊಸ ಫ್ಯಾಕ್ಟರಿಗೆ ಪರ್ಮಿಷನ್ ಕೊಟ್ಟಿರುವುದು ಗೊತ್ತಿದೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಭದ್ರಾವತಿಯಲ್ಲಿ ಫ್ಯಾಕ್ಟರಿ ಸ್ಟಾರ್ಟ್ ಮಾಡುವುದಕ್ಕೆ ಪರ್ಮಿಷನ್ ಕೊಟ್ಟಿದೆ ಎಂದು ಹೇಳಿದಿರಿ. ಅದು ಶಿವಮೊಗ್ಗಾಕ್ಕೆ ಆಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—ಭದ್ರಾವತಿಗೆ ಎಂದು ಹೇಳಲಿಲ್ಲವಲ್ಲ. By mistake ಆ ರೀತಿ ಹೇಳಿರಬಹುದು, ಅದು ಶಿವಮೊಗ್ಗಾ ಜಿಲ್ಲೆಗೆ.